# ಗೃಹ ಪ್ರವೇಶದ ಖುಷಿ

**ಸ್ಪಂದನಾ ಸೋಮಣ್ಣ**
ಕಲರ್ಸ್ ಕನ್ನಡ 'ಗೃಹಪ್ರವೇಶ'ದ ಪಲ್ಲವಿ



**◆ ನಟನೆ ಆರಂಭವಾಗಿದ್ದು ಹೇಗೆ?**

ಕಾಲೇಜು ದಿನಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಹೆಚ್ಚು ತೊಡಗುತ್ತಿದ್ದೆ. ಅದನ್ನು ಕಂಡೇ ಆಡಿಷನ್‌ಗೆ ಅವಕಾಶಗಳು ಬಂದವು. ಎಂಜಿನಿಯರಿಂಗ್ ಮುಗಿದ ನಂತರವೇ ನಟನೆಯನ್ನು ವೃತ್ತಿಯಾಗಿ ತೆಗೆದುಕೊಂಡೆ. ಅಭಿನಯ ನನಗೆ ಸಿಕ್ಕ ಅದ್ಭುತ ಅವಕಾಶ. ಮೊದಲು 'ನಾನು ನನ್ನ ಕನಸು' ಧಾರಾವಾಹಿಯಲ್ಲಿ ಮಾಡಿದೆ. ತೆಲುಗಿನಲ್ಲಿ ವೆಬ್ ಸಿರೀಸ್ ಮಾಡಿದ್ದೇನೆ. ಆರಂಭದಲ್ಲಿ ನಮ್ಮ ಮನೆಯಲ್ಲಿ ಇದಕ್ಕೆ ಪೂರಕವಾದ ಸ್ಪಂದನೆ ಸಿಗಲಿಲ್ಲ. ನಾವೇ ಅವಕಾಶವನ್ನು ಹುಡುಕಿಕೊಂಡು ಹೋದರೂ ಸಿಗುವುದು ಕಷ್ಟ. ಹೀಗಿರುವಾಗ ಸಿಕ್ಕ ಅವಕಾಶವನ್ನು ಏಕೆ ಮಿಸ್ ಮಾಡಿಕೊಳ್ಳುವುದು ಎಂದು ನಟನೆಯನ್ನು ಮಾಡುತ್ತಿದ್ದೇನೆ.

**◆ ಪಲ್ಲವಿ ಪಾತ್ರದ ಹರವು ಹೇಗಿದೆ?**

ಪಕ್ಕಾ ಹಳ್ಳಿಹುಡುಗಿ. ಊರಲ್ಲಿ ಕೃಷಿ ಕೆಲಸಗಳನ್ನು ಮಾಡಿಕೊಂಡು ಇದ್ದವಳು. ಆಕೆ ಹುಟ್ಟಿದಾಗಿನಿಂದಲೂ ಅಪ್ಪನನ್ನು ನೋಡಿಲ್ಲ. ಅಪ್ಪ ಇಲ್ಲ ಎಂದೇ ಅಮ್ಮ ನಂಬಿಸಿರುತ್ತಾಳೆ. ಕೊನೆ ಪಕ್ಷ ಅಪ್ಪನ ಸಮಾಧಿ ತೋರಿಸು ಎನ್ನುವುದು ಆಕೆಯ ಹಟ. ಬೇರೆ ಮಕ್ಕಳನ್ನು ನೋಡಿದಾಗ ತನಗೂ ಅಪ್ಪನ ಪ್ರೀತಿ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಭಾವುಕಳಾಗುತ್ತಾಳೆ. ಅಮ್ಮ ಚೆನ್ನಾಗಿ ನೋಡಿಕೊಳ್ಳುತ್ತಿದ್ದರೂ ತಂದೆ ಇದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎನ್ನುವ ಕಲ್ಪನೆ ಮಾತ್ರ ಅವಳ ತಲೆಯಲ್ಲಿ ನಿರಂತರವಾಗಿ ಕೊರೆಯುತ್ತಿರುತ್ತದೆ. ಆ ಮನೆಗೆ ಆಕೆಯೇ ಆಸರೆ. ಊರಲ್ಲಿ ತನ್ನ ತಾಯಿ ಬಗ್ಗೆ ಯಾರೇ ಹೀಯಾಳಿಸಿದರೂ ನೊಂದುಕೊಳ್ಳುತ್ತಾಳೆ. ತಾಯಿ ರಕ್ಷಣೆಗೆ ನಿಲ್ಲುವ ದಿಟ್ಟತನದ ಹುಡುಗಿ. ಒಮ್ಮೆ ಅಪ್ಪ ಬದುಕಿದ್ದಾರೆ ಎಂದು ಗೊತ್ತಾಗುತ್ತದೆ. ತನ್ನ ಅಪ್ಪನನ್ನು ಕರೆದುಕೊಂಡುಬಂದು ಗೃಹಪ್ರವೇಶ ಮಾಡಿಸುತ್ತೇನೆ ಎಂಬ ಪ್ರತಿಜ್ಞೆ ಮಾಡಿ ಬೆಂಗಳೂರಿಗೆ ಬಂದಿದ್ದಾಳೆ. ಮುಂದೆ ಏನಾಗುತ್ತದೆ ಎನ್ನುವ ಕುತೂಹಲ ಇದೆ.

**◆ ಅಪ್ಪನ ಶೋಧದಲ್ಲಿ ಉಂಟಾಗುವ ತೊಳಲಾಟವನ್ನು ಹೇಗೆ ಆ ಪಾತ್ರ ನಿಭಾಯಿಸುತ್ತದೆ?**

ಅಪ್ಪನ ಪ್ರೀತಿಯನ್ನು ಹುಡುಕಿಕೊಂಡು ಬಂದವಳು ಪಲ್ಲವಿ. ಅವಳ ಅದೃಷ್ಟಕ್ಕೆ ತನ್ನ ಅಪ್ಪನನ್ನು ಪತ್ತೆಹಚ್ಚುತ್ತಾಳೆ. ಆದರೆ ಎದುರಿಗೇ ಅವರು ಬಂದರೂ ಅಪ್ಪ ಎಂದು ಕರೆಯುವಂತಿಲ್ಲ. ಆ ನೋವು ಬಾಧಿಸುತ್ತಿರುತ್ತದೆ. ಆ ಮನೆಯವರು ಕೆಲಸದವಳನ್ನಾಗಿ ಮಾಡಿಕೊಂಡಿದ್ದಾರೆ. ಅದರ ನಡುವೆ ಅವಮಾನವೂ ಎದುರಾಗುತ್ತದೆ. ಆಕೆ ಪಾಸಿಟಿವ್ ಯೋಚಿಸುವ ಹುಡುಗಿ. ಇದೂ ದೇವರು ಕೊಟ್ಟಿರುವ ಅವಕಾಶ ಎಂದೇ ಭಾವಿಸಿದ್ದಾಳೆ. ದೇವರೇ ತನ್ನನ್ನು ಅಪ್ಪನ ಹತ್ತಿರ ತಂದು ಬಿಟ್ಟಿದ್ದಾನೆ. ಅಲ್ಲೇ ಕೆಲಸ ಮಾಡಿಕೊಂಡು ಇದ್ದರೆ, ಮತ್ತೊಂದು ಅವಕಾಶ ಸಿಕ್ಕೇ ಸಿಗುತ್ತದೆ ಎಂದುಕೊಳ್ಳುತ್ತಾಳೆ. ತನ್ನೆಲ್ಲ ಕಷ್ಟವನ್ನೂ ಧನಾತ್ಮಕವಾಗಿಯೇ ತೆಗೆದುಕೊಳ್ಳುತ್ತಾಳೆ.

**◆ ಎಂಜಿನಿಯರ್ ಆಗಬೇಕಿತ್ತು ಅನಿಶ್ಚಿತ ಕೆಲಸಕ್ಕೆ ಬಂದೆ ಅಂತ ನಿಮಗೆ ಅನ್ನಿಸಿದೆಯಾ?**

ಅವಕಾಶ ಬಂದಾಗ ಮಿಸ್ ಮಾಡಿಕೊಳ್ಳಬಾರದು. ಖುಷಿ ಕೊಡುವುದನ್ನೇ ಮಾಡಬೇಕು ಎಂದುಕೊಂಡಿದ್ದೇನೆ. ನನಗೆ ಅಭಿನಯ ಖುಷಿ ಕೊಟ್ಟಿದೆ. ಅದನ್ನೇ ಮಾಡುತ್ತಿದ್ದೇನೆ. ಎಂಜಿನಿಯರ್ ಆಗಿ ಯಾವುದೋ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ ಚೆನ್ನಾಗಿ ಇರುತ್ತಿದ್ದೆ ಎಂಬ ಯೋಚನೆಯೇ ಬಂದಿಲ್ಲ. ನಿತ್ಯವೂ ಸಂತೋಷದಿಂದ ಸೆಟ್‌ಗೆ ಹೋಗುತ್ತೇನೆ. ಅಲ್ಲಿ ಪಲ್ಲವಿ ಆಗುವುದು, ಅವಳಂತೆ ಇರುವುದು. ಆಕೆಯ ಬದುಕು ಬಾಳುವುದು ಎಲ್ಲ ಖುಷಿ ಕೊಟ್ಟಿದೆ. ಮೇಕಪ್ ಹಾಕುವುದು, ಡೈಲಾಗ್ ಪಟಿಸುವುದು, ಸ್ಕ್ರಿಪ್ಟ್ ನೋಡುವುದು ಎಲ್ಲ ಇಷ್ಟ ಆಗುತ್ತದೆ.

**◆ ಸಾರ್ಥಕ ಅನ್ನಿಸಿದ ಕ್ಷಣಗಳನ್ನು ನೆನಪಿಸಬಹುದಾ?**

ಅಂತಹ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ಜನರ ಪ್ರತಿಸ್ಪಂದನೆ ಸಾಮಾಜಿಕ ಮಾಧ್ಯಮಗಳಲ್ಲಿ ಚೆನ್ನಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್‌ಗಳನ್ನು ಹಾಕಿದ್ದಾರೆ. ಅದರ ಫೋಟೊಗಳನ್ನು ಕೆಲವರು ಕಳಿಸುತ್ತಾರೆ. ನನ್ನ ಅಜ್ಜ–ಅಜ್ಜಿ ಸಂಜೆ ಫೋನ್ ಮಾಡಿ ಸೀರಿಯಲ್ ಸಾರಾಂಶವನ್ನು ಹೇಳುವುದು ಮಜಾ ಅನ್ನಿಸುತ್ತದೆ. ಈಗಾಗಲೇ ಕೆಲವರು 'ನೀವು ಪಲ್ಲವಿ ಅಲ್ಲವಾ' ಎಂದು ಕೇಳುತ್ತಿದ್ದಾರೆ. ಇನ್ನು ಸಿನಿಮಾ ಮಾಡಬೇಕು. ದೊಡ್ಡ ದೊಡ್ಡ ವೇದಿಕೆಗಳಲ್ಲಿ ಕಾಣಿಸಿಕೊಳ್ಳಬೇಕು. ಭಿನ್ನ ಭಿನ್ನ ಪಾತ್ರಗಳಿಗೆ ಜೀವವನ್ನು ತುಂಬಬೇಕು. ಒಂದು ಕೆಲಸ ಮತ್ತೊಂದು ಕೆಲಸಕ್ಕೆ ಸೋಪಾನವಾಗುತ್ತದೆ ಎಂದು ಅಂದುಕೊಂಡಿದ್ದೇನೆ. ಈಗ ಸಿಕ್ಕ ಕೆಲಸವನ್ನು ಚೆನ್ನಾಗಿ ಬಳಸಿಕೊಳ್ಳಬೇಕು.

■ **ರಾಘವೇಂದ್ರ ಕೆ.**